- -                                    ಓ ಎಸ್ ನಂ.109/2019

ಪಿ.ಡಬ್ಲ್ಯೂ:1

ದಿನಾಂಕ : 06-08-2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ವಿಭಾಗಕ್ಕಾಗಿ ಕೋರಿ ಐದು ಸ್ವತ್ತುಗಳ ಸಂಬಂಧ ಈ ದಾವೆ ಸಲ್ಲಿಸಿದ್ದೇನೆ . ಸ್ವತ್ತುಗಳನ್ನು ಸರ್ಕಾರ ವಶಪಡಿಸಿಕೊಂಡಿರುವ ಸಂಬಂಧ ನೀಡಿರುವ ಪರಿಹಾರದ ಸಂಬಂಧವೂ ಸಹಾ ಭಾಗಾಂಶ ಕೋರಿದ್ದೇನೆ . ದಾವಾ ಸ್ವತ್ತುಗಳು ಮೂಲತಃ ನನ್ನ ತಾತ ನೀರಗಂಟಿ ತಿಮ್ಮಯ್ಯ ರವರಿಗೆ ಸೇರಿದ್ದಾಗಿದೆ . ನನ್ನ ತಾತನ ಮರಣಾ ನಂತರ ಅವರ ವಾರಸುದಾರರೆಲ್ಲರೂ ದಾವಾ ಸ್ವತ್ತುಗಳಲ್ಲಿ ಒಟ್ಟಾಗಿ ಸ್ವಾಧೀನದಲ್ಲಿದ್ದೇವೆ ಎಂದರೆ ಸುಳ್ಳು ವಿವರ ನಮೂದಿಸಿದ್ದೇವೆ ಎಂದರೆ ಸರಿಯಲ್ಲ . ಇಂದಿಗೂ ಸಹಾ ದಾವಾ ಸ್ವತ್ತುಗಳಲ್ಲಿ ಪ್ರತಿವಾದಿಗಳು ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ನಾವೆಲ್ಲರೂ ಒಟ್ಟಾಗಿ ವ್ಯವಸಾಯ ಮಾಡುತ್ತಿದ್ದೇವೆ ಎಂದು ಸಾಕ್ಷಿ ಹೇಳಿದ್ದಾರೆ . ದಾವಾ ಸ್ವತ್ತುಗಳಲ್ಲಿ ಭಾಗಾಂಶ ಬರಬೇಕೆಂದು ಸುಳ್ಳು ವಿವರಗಳ ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ .

(ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ, ಕೇಳಿದೆ, ಸರಿ ಇದೆ, ಎಂದರು.

Sd/-
(ಅನುಪಮ.ಡಿ. )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಗುಬ್ಬಿ.